**National**
**Kannada**
**16.04.2025 19.35 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಫಿನ್‌ಲ್ಯಾಂಡ್ ಅಧ್ಯಕ್ಷರೊಂದಿಗೆ ಪ್ರಧಾನಿ ನರೇಂದ್ರ ಮೋದಿ ದ್ವಿಪಕ್ಷೀಯ ಮಾತುಕತೆ
2. ನೂತನ ವಕ್ಫ್ ಕಾನೂನಿನ ಮೇಲಿನ ತನ್ನ ಮಧ್ಯಂತರ ಆದೇಶಕ್ಕೆ ಸುಪ್ರೀಂಕೋರ್ಟ್ ತಡೆ
3. ಇಂದಿನಿಂದ ಭಾರತ-ಉಜ್ಬೇಕಿಸ್ತಾನ್ ಜಂಟಿ ಮಿಲಿಟರಿ ಸಮರಾಭ್ಯಾಸದ ೬ನೇ ಆವೃತ್ತಿ ಆರಂಭ
4. ಐಪಿಎಲ್ ಟಿ-೨೦ ಕ್ರಿಕೆಟ್ : ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಟಾಸ್ ಗೆದ್ದ ರಾಜಸ್ಥಾನ ರಾಯಲ್ಸ್ ಫೀಲ್ಡಿಂಗ್ ಆಯ್ಕೆ

<><><>

ಪ್ರಧಾನಿ ನರೇಂದ್ರ ಮೋದಿ ಇಂದು ಫಿನ್‌ಲ್ಯಾಂಡ್ ಅಧ್ಯಕ್ಷ ಅಲೆಗ್ಸಾಂಡರ್ ಸ್ಟಬ್ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದರು. ಮಾತುಕತೆ ವೇಳೆ ಉಭಯ ನಾಯಕರು ಉಕ್ರೇನ್ ಪರಿಸ್ಥಿತಿ ಸೇರಿದಂತೆ ಪರಸ್ಪರ ಆಸಕ್ತಿಯ ಪ್ರಾದೇಶಿಕ ಮತ್ತು ಜಾಗತಿಕ ವಿಷಯಗಳ ಕುರಿತು ಅಭಿಪ್ರಾಯಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡರು. ಡಿಜಿಟಲೀಕರಣ, ಸುಸ್ಥಿರತೆ ಮತ್ತು ಚಲನಶೀಲತೆ ಸೇರಿದಂತೆ ಭಾರತ-ಫಿನ್‌ಲ್ಯಾಂಡ್ ನಡುವಿನ ಸಹಯೋಗವನ್ನು ಉಭಯ ನಾಯಕರು ಪರಿಶೀಲಿಸಿದರು. ಕ್ವಾಂಟಮ್, ೫-ಜಿ, ೬-ಜಿ, ಕೃತಕಬುದ್ಧಿಮತ್ತೆ, ಸೈಬರ್ ಭದ್ರತೆ ಸೇರಿದಂತೆ ಇತರೆ ವಲಯಗಳಲ್ಲಿ ಉಭಯ ದೇಶಗಳ ನಡುವೆ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು. ಯುರೋಪಿಯನ್ ಒಕ್ಕೂಟದಲ್ಲಿ ಫಿನ್‌ಲ್ಯಾಂಡ್ ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಭಾರತ-ಯುರೋಪಿಯನ್ ಒಕ್ಕೂಟದ ನಡುವಿನ ಸಂಬಂಧಗಳ ನಿಕಟತೆ ಮತ್ತು ಪರಸ್ಪರ ಪ್ರಯೋಜನಕಾರಿ ಮುಕ್ತ ವ್ಯಾಪರ ಒಪ್ಪಂದದ ತೀರ್ಮಾನಕ್ಕೆ ತಮ್ಮ ದೇಶದ ಬೆಂಬಲವನ್ನು ಫಿನ್‌ಲ್ಯಾಂಡ್ ಅಧ್ಯಕ್ಷರು ಘೋಷಿಸಿದರು.

<><><>

ಸರ್ವೋಚ್ಚ ನ್ಯಾಯಾಲಯ ಎತ್ತಿದ ಮೂರು ಅಂಶಗಳ ಕುರಿತು ತನ್ನ ವಾದವನ್ನು ಸಿದ್ಧಪಡಿಸಲು ಕೇಂದ್ರ ಸರ್ಕಾರ ಹೆಚ್ಚಿನ ಸಮಯಾವಕಾಶ ಕೇಳಿದ ನಂತರ ನೂತನ ವಕ್ಫ್ ಕಾನೂನಿನ ಮೇಲಿನ ತನ್ನ ಮಧ್ಯಂತರ ಆದೇಶಕ್ಕೆ ಇಂದು ಸುಪ್ರೀಂಕೋರ್ಟ್ ತಡೆ ಹಿಡಿದಿದೆ. ಈ ಕುರಿತು ನಾಳೆ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಲಿದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ

ಹಾಗೂ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಕೆ.ವಿ.ವಿಶ್ವನಾಥನ್ ಅವರನ್ನೊಳಗೊಂಡ ನ್ಯಾಯಪೀಠವು, ನ್ಯಾಯಾಲಯವು ವಕ್ಫ್ ತಿದ್ದುಪಡಿ ವಿಧೇಯಕ - ೨೦೨೫ರ ಕುರಿತಾದ ಅರ್ಜಿಗಳನ್ನು ವಿಚಾರಣೆ ನಡೆಸುತ್ತಿರುವಾಗ, ನ್ಯಾಯಾಲಯ ವಕ್ಫ್ ಎಂದು ಘೋಷಿಸಿದ ಆಸ್ತಿಗಳನ್ನು ಕೇಂದ್ರ ಸರ್ಕಾರ ಡಿ-ನೋಟಿಫೈ ಮಾಡಬಾರದು ಎಂದು ಸೂಚಿಸಿತು.

<><><><>

ಸರ್ವೋಚ್ಚ ನ್ಯಾಯಾಲಯದ ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾಯಮೂರ್ತಿ ಬಿ.ಆರ್.ಗವಾಯ್ ಅವರ ಹೆಸರನ್ನು ಸಿಜೆಐ ಸಂಜೀವ್ ಖನ್ನಾ ಶಿಫಾರಸು ಮಾಡಿದ್ದಾರೆ. ನ್ಯಾಯಮೂರ್ತಿ ಬಿ.ಆರ್.ಗವಾಯ್ ಅವರು, ಸರ್ವೋಚ್ಚ ನ್ಯಾಯಾಲಯದ ೨ನೇ ಅತ್ಯಂತ ಹಿರಿಯ ನ್ಯಾಯಮೂರ್ತಿಯಾಗಿದ್ದು, ಅವರ ಹೆಸರನ್ನು ಕೇಂದ್ರ ಕಾನೂನು ಸಚಿವಾಲಯಕ್ಕೆ ಶಿಫಾರಸ್ಸು ಮಾಡಲಾಗಿದೆ. ಪ್ರಸ್ತುತ ಸಿಜೆಐ ಸಂಜೀವ್ ಖನ್ನಾ ಅವರ ಅಧಿಕಾರವಧಿ ಮುಂದಿನ ತಿಂಗಳ ೧೭ ರಂದು ಕೊನೆಗೊಳ್ಳಲಿದೆ.

<><><><>

ಇದೇ ಮೊದಲ ಬಾರಿಗೆ ಕೇಂದ್ರೀಯ ರೈಲ್ವೆಯು ಮುಂಬೈ-ಮನ್ಮಾಡ್ ಪಂಚವಟಿ ಎಕ್ಸ್‌ಪ್ರೆಸ್ ರೈಲಿನೊಳಗೆ ಎಟಿಎಂ ಅನ್ನು ಪರಿಚಯಿಸಿದೆ. ಈ ಕುರಿತ ವಿಡಿಯೋವನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ಆಕಾಶವಾಣಿಯೊಂದಿಗೆ ಮಾತನಾಡಿದ ಕೇಂದ್ರೀಯ ರೈಲ್ವೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಸ್ವಪ್ನಿಲ್ ನಿಲಾ, ಈ ಉಪಕ್ರಮದ ತಾಂತ್ರಿಕ ಕಾರ್ಯ ಸಾಧ್ಯತೆಯನ್ನು ಪರಿಶೀಲಿಸಿದ ನಂತರ ಈ ಸೌಲಭ್ಯವನ್ನು ಇತರೆ ರೈಲುಗಳಿಗೆ ವಿಸ್ತರಿಸಬಹುದು ಎಂದು ತಿಳಿಸಿದ್ದಾರೆ.

<><><><>

ಭಾರತದ ಮೊದಲ ರೈಲು ಪ್ರಯಾಣದ ೧೭೨ನೇ ವಾರ್ಷಿಕೋತ್ಸವವನ್ನು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಇಂದು ಆಚರಿಸಿದರು. ೧೮೫೩ರ ಏಪ್ರಿಲ್ ೧೬ರಂದು ಮಹಾರಾಷ್ಟ್ರದ ಥಾಣೆಯಿಂದ ದೇಶದ ಮೊದಲ ರೈಲು ಸಂಚಾರ ಆರಂಭಿಸಿತು. ಸಾಮಾಜಿಕ ಜಾಲತಾಣದ ತಮ್ಮ ಪೋಸ್ಟ್‌ನಲ್ಲಿ ಸಚಿವ ಅಶ್ವಿನಿ ವೈಷ್ಣವ್, ಈ ರೈಲು ೪೦೦ ಆಹ್ವಾನಿತ ಪ್ರಯಾಣಿಕರನ್ನು ಹೊತ್ತ ೧೪ ಬೋಗಿಗಳನ್ನು ಒಳಗೊಂಡಿತ್ತು. ಸಿಂಧ್, ಸುಲ್ತಾನ್ ಮತ್ತು ಸಾಹೇಬ್ ಎಂಬ ಮೂರು ಎಂಜಿನ್‌ಗಳಿಂದ ಈ ರೈಲು ಚಲಿಸಿತು. ಒಂದು ಗಂಟೆ ೧೫ ನಿಮಿಷಗಳಲ್ಲಿ ೩೪ ಕಿಲೋಮೀಟರ್ ದೂರವನ್ನು ಕ್ರಮಿಸಿತು ಎಂದು ವಿವರಿಸಿದರು. ಈ ಮೊದಲ ಪ್ರಯಾಣದಿಂದಲೂ ಭಾರತೀಯ ರೈಲ್ವೆ ದೇಶಕ್ಕೆ ಸೇವೆ ಸಲ್ಲಿಸುವ ತನ್ನ ಬದ್ಧತೆಯಲ್ಲಿ ಧೃಡವಾಗಿ ಉಳಿದಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಪ್ರತಿಪಾದಿಸಿದರು.

<><><><>

ಹರಿಯಾಣದಲ್ಲಿ ನಡೆದ ಭೂ ಅವ್ಯವಹಾರಕ್ಕೆ ಸಂಬಂಧಿಸಿದ ಹಣ ವರ್ಗಾವಣೆ ಪ್ರಕರಣದಲ್ಲಿ ತನಿಖೆ ಭಾಗವಾಗಿ ಜಾರಿ ನಿರ್ದೇಶನಾಲಯ-ಇಡಿ ಸತತ ೨ನೇ ದಿನವಾದ ಇಂದು ಕಾಂಗ್ರೆಸ್ ಹಿರಿಯ ನಾಯಕಿ ಪ್ರಿಯಾಂಕ ವಾದ್ರಾ ಅವರ ಪತಿ ಮತ್ತು ಉದ್ಯಮಿ ರಾಬರ್ಟ್ ವಾದ್ರಾ ಅವರ ವಿಚಾರಣೆಯನ್ನು ಮುಂದುವರಿಸಿತು. ನವದೆಹಲಿಯ ಇಡಿ ಕಚೇರಿಯಲ್ಲಿ ಅವರ ವಿಚಾರಣೆಯನ್ನು ನಡೆಸಲಾಯಿತು. ಈ ಪ್ರಕರಣವು ರಾಬರ್ಟ್ ವಾದ್ರಾ ಅವರ ಕಂಪನಿಯಿಂದ ಗುರುಗ್ರಾಮ್‌ದಲ್ಲಿ ಭೂಮಿ ಖರೀದಿಗೆ ಸಂಬಂಧಿಸಿದ್ದಾಗಿದೆ.

<><><>

ಭಾರತ-ಉಜ್ಬೇಕಿಸ್ತಾನ್ ಜಂಟಿ ಮಿಲಿಟರಿ ಸಮರಾಭ್ಯಾಸದ ೬ನೇ ಆವೃತ್ತಿಯು ಇಂದು ಮಹಾರಾಷ್ಟ್ರದ ಪುಣೆಯ ಔಂಧ್‌ನಲ್ಲಿರುವ ವಿದೇಶಿ ತರಬೇತಿ ನೋಡ್‌ನಲ್ಲಿ ಪ್ರಾರಂಭವಾಯಿತು. ೬೦ ಸಿಬ್ಬಂದಿಯನ್ನು ಒಳಗೊಂಡ ಭಾರತೀಯ ತುಕಡಿಯನ್ನು ಜೆಎಟಿ ರಿಜಿಮೆಂಟ್ ಮತ್ತು ಭಾರತೀಯ ವಾಯುಪಡೆ ಪ್ರತಿನಿಧಿಸುತ್ತಿದೆ. ಉಜ್ಬೇಕಿಸ್ತಾನ್ ಸೇನೆಯ ಸಿಬ್ಬಂದಿ ಆ ದೇಶವನ್ನು ಪ್ರತಿನಿಧಿಸುತ್ತಿದ್ದಾರೆ. ಜಂಟಿ ಸಮರಾಭ್ಯಾಸವು ಭಾರತ-ಉಜ್ಬೇಕಿಸ್ತಾನ್‌ನಲ್ಲಿ ಪರ್ಯಾವಾಗಿ ನಡೆಸುವ ವಾರ್ಷಿಕ ತರಬೇತಿ ಕಾರ್ಯಕ್ರಮವಾಗಿದೆ. ಇದು ರಕ್ಷಣಾ ಸಹಕಾರವನ್ನು ಹೆಚ್ಚಿಸುತ್ತದೆ. ಎರಡೂ ಸ್ನೇಹಪರ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುತ್ತದೆ. ಈ ಸಮರಾಭ್ಯಾಸವು ಇದೇ ೨೮ರವರೆಗೆ ನಡೆಯಲಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

<><><>

ಜಗತ್ತಿನ ನಿರ್ದಿಷ್ಟ ಕೌಶಲ್ಯಪೂರ್ಣ ಮಾನವಶಕ್ತಿಯ ಅವಶ್ಯಕತೆಗಳನ್ನು ಪೂರೈಸಲು ಭಾರತದಲ್ಲಿ ಕೌಶಲ್ಯ ತರಬೇತಿ ವೇದಿಕೆಯನ್ನು ಸ್ಥಾಪಿಸುವಂತೆ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಡಾ. ಮನ್ಸುಖ್ ಮಾಂಡವೀಯ ಕರೆ ನೀಡಿದ್ದಾರೆ. ನವದೆಹಲಿಯಲ್ಲಿಂದು ನಡೆದ ಭಾರತ-ಮಧ್ಯಪ್ರಾಚ್ಯ-ಯೂರೋಪ್ ಆರ್ಥಿಕ ಕಾರಿಡಾರ್ ಸಮಾವೇಶ-೨೦೨೫ ಉದ್ದೇಶಿಸಿ ಮಾತನಾಡಿದ ಅವರು, ಈ ಕಾರಿಡಾರ್‌ನಲ್ಲಿ ಕೌಶಲ್ಯಪೂರ್ಣ ಮಾನವಶಕ್ತಿಯನ್ನು ಒದಗಿಸುವ ಮೂಲಕ ಭಾರತವು ತನ್ನ ಯುವಜನಸಂಖ್ಯಾ ಲಾಭಾಂಶವನ್ನು ಹೆಚ್ಚಿಸಿಕೊಳ್ಳಬಹುದು ಎಂದು ಹೇಳಿದರು.

<><><>

ಕಳೆದ ೧೦ ವರ್ಷಗಳ ಹಿಂದೆ ಮೀನು ಉತ್ಪಾದನೆ ೯೫ ಲಕ್ಷ ಟನ್‌ಗಳಷ್ಟಿತ್ತು. ಈಗ ಅದು ೧೮೪ ಲಕ್ಷ ಟನ್‌ಗಳಿಗೆ ಏರಿಕೆಯಾಗಿದೆ ಎಂದು ಕೇಂದ್ರ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಖಾತೆ ರಾಜ್ಯ ಸಚಿವ ಜಾರ್ಜ್ ಕುರಿಯನ್ ತಿಳಿಸಿದ್ದಾರೆ. ಪುದುಚೇರಿಯಲ್ಲಿಂದು ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿಯಲ್ಲಿ ಹಲವಾರು ಯೋಜನೆಗಳನ್ನು ಉದ್ಘಾಟಿಸಿದ ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಈ ಯೋಜನೆಯಡಿಯಲ್ಲಿ ಪುದುಚೇರಿಯಲ್ಲಿ ೨ ಸಾವಿರದ ೩೦೦ ಮೀನುಗಾರಿಕಾ ದೋಣಿಗಳಲ್ಲಿ ಟ್ರಾನ್ಸ್‌ಪಾಂಡರ್‌ಗಳನ್ನು

ಅಳವಡಿಸಲಾಗುವುದು ಎಂದು ಘೋಷಿಸಿದರು. ಈ ಟ್ರಾನ್ಸ್‌ಪಾಂಡರ್‌ಗಳು ಮೀನುಗಾರರು ತಮ್ಮ ಕುಟುಂಬಗಳೊಂದಿಗೆ ಸಂವಹನ ನಡೆಸಲು, ತುರ್ತು ವೈದ್ಯಕೀಯ ಸಹಾಯ ಪಡೆಯಲು, ಅಂತಾರಾಷ್ಟ್ರೀಯ ಸಮುದ್ರ ಗಡಿಗಳನ್ನು ದಾಟುವಾಗ ಎಚ್ಚರಿಕೆಗಳನ್ನು ಪಡೆಯಲು ಮತ್ತು ಮೀನು ಲಭ್ಯತೆಯ ಬಗ್ಗೆ ನೈಜ್ಯ ಸಮಯದ ಮಾಹಿತಿಯನ್ನು ಪಡೆಯಲು ಅನುವು ಮಾಡಿಕೊಡುತ್ತದೆ ಎಂದು ವಿವರಿಸಿದರು. ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯಡಿ ಈಗ ಮೀನುಗಾರರು ೫ ಲಕ್ಷ ರೂಪಾಯಿಗಳವರೆಗೆ ಸಾಲ ಪಡೆಯಬಹುದು ಎಂದು ಸಚಿವ ಜಾರ್ಜ್ ಕುರಿಯನ್ ಮಾಹಿತಿ ನೀಡಿದರು.

<><><>

ಭಾರತದ ಒಟ್ಟು ಸರಕು ಮತ್ತು ಸೇವೆಗಳ ರಫ್ತು ಶೇಕಡ ೫.೫ ರಷ್ಟು ಬೆಳವಣಿಗೆ ದಾಖಲಿಸಿದೆ. ಜಾಗತಿಕ ಮಾರುಕಟ್ಟೆಯಲ್ಲಿನ ಅನಿಶ್ಚಿತತೆಯ ಹೊರತಾಗಿಯೂ ಹಿಂದಿನ ಹಣಕಾಸು ವರ್ಷದಲ್ಲಿ ೭೭೮.೧೩ ಶತಕೋಟಿ ಡಾಲರ್‌ಗಳಿಗೆ ಹೋಲಿಸಿದರೆ, ೨೦೨೪-೨೫ರ ಏಪ್ರಿಲ್-ಮಾರ್ಚ್ ಅವಧಿಯಲ್ಲಿ ದಾಖಲೆಯ ೮೨೦.೯೩ ಶತಕೋಟಿ ಡಾಲರ್‌ಗಳನ್ನು ತಲುಪಿದೆ. ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಮಾಹಿತಿ ಪ್ರಕಾರ, ಈ ಅವಧಿಯಲ್ಲಿ ದೇಶದ ಒಟ್ಟು ರಫ್ತು ೮೨೦.೯೩ ಶತಕೋಟಿ ಡಾಲರ್‌ಗಳೆಂದು ಅಂದಾಜಿಸಲಾಗಿದೆ. ಆದರೆ ಒಟ್ಟು ಆಮದು ೯೧೫.೧೯ ಶತಕೋಟಿ ಡಾಲರ್‌ಗಳು ಮತ್ತು ಸರಕುಗಳ ರಫ್ತು ೪೩೭.೪ ಶತಕೋಟಿ ಡಾಲರ್‌ಗಳನ್ನು ತಲುಪಿದೆ.

<><><>

ಭಾರತದ ಅತಿದೊಡ್ಡ ಇ-ಮಾರುಕಟ್ಟೆಯಾದ ಸರ್ಕಾರಿ ಇ-ಮಾರುಕಟ್ಟೆ, ೨೦೨೪-೨೫ರ ಹಣಕಾಸು ವರ್ಷದಲ್ಲಿ ಆರೋಗ್ಯ, ಜೀವ ಮತ್ತು ವೈಯಕ್ತಿಕ ಅಪಘಾತ ವಿಮಾ ಪಾಲಿಸಿಗಳನ್ನು ಒಳಗೊಂಡ ೧ ಲಕ್ಷ ೩೦ ಸಾವಿರ ಕೋಟಿಗೂ ಹೆಚ್ಚು ವ್ಯಕ್ತಿಗಳಿಗೆ ವಿಮೆಯನ್ನು ಒದಗಿಸಿದೆ. ಇದೇ ಹಣಕಾಸು ವರ್ಷದಲ್ಲಿ ಸರ್ಕಾರಿ ಇ-ಮಾರುಕಟ್ಟೆ ೧೦ ಲಕ್ಷ ಮಾನವಶಕ್ತಿ ಸಂಪನ್ಮೂಲಗಳನ್ನು ನೇಮಿಸಿಕೊಂಡಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ತಿಳಿಸಿದೆ.

<><><>

ದೆಹಲಿಯ ಅರುಣ್ ಜೆಟ್ಲಿ ಕ್ರೀಡಾಂಗಣದಲ್ಲಿಂದು ನಡೆಯುತ್ತಿರುವ ಇಂಡಿಯನ್ ಪ್ರೀಮಿಯರ್ ಲೀಗ್-ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ರಾಜಸ್ಥಾನ ರಾಯಲ್ಸ್ ತಂಡಗಳು ಮುಖಾಮುಖಿಯಾಗಿವೆ.

ಟಾಸ್ ಗೆದ್ದ ರಾಜಸ್ಥಾನ ರಾಯಲ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>